ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, ಇ-mail: nregs-ka@nic.in

ಸಂಖ್ಯೆ:ಗ್ರಾಅಪ: 14 :ಉಖಾಯೋ:2021 ದಿನಾಂಕ: 01-02-2021

## ಅಧಿಸೂಚನೆ

ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಯಡಿ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸಿ, ಗ್ರಾಮೀಣ ಜನರ ಜೀವನ ಆಧಾರಕ್ಕೆ ಭದ್ರತೆಯನ್ನು ಒದಗಿಸುತ್ತಿದೆ. ಯೋಜನೆಯ ವಿವಿಧ ಕಾರ್ಯಗಳ ಅನುಷ್ಠಾನದ ಸಂದರ್ಭದಲ್ಲಿ ಆಸ್ತಿ ಸೃಜನೆಯಲ್ಲಿ ಕಂಡುಬರಬಹುದಾಗಿರುವ ನ್ಯೂನ್ಯತೆಗಳ ಬಗ್ಗೆ ಸ್ಥಳ ಪರಿಶೀಲನೆ ಮಾಡಿ, ಕಾಮಗಾರಿಗಳ ಗುಣಮಟ್ಟದ ಕುರಿತು ವರದಿ ನೀಡಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಗುಣ ನಿಯಂತ್ರಣ ಮಾನಿಟರ್‌ಗಳನ್ನು (Quality Monitors) ಎಂಪ್ಯಾನಲ್ ಮಾಡಲು ಹಾಗೂ ನರೇಗಾ ಯೋಜನೆಯಡಿ ಕಾಲಕಾಲಕ್ಕೆ ಹೊರಡಿಸುವ ಸೂಚನೆಗಳಂತೆ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವ ಕುರಿತು, ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳ ಸೇವಾ ವಿಷಯಗಳ ಕುರಿತು ಪರಿಶೀಲನೆಗಾಗಿ, ನಿಯಮಾನುಸಾರ ನಿರ್ವಹಿಸಬೇಕಾದ ಕಡತ ಹಾಗೂ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿರುವ ಬಗ್ಗೆ ಪರಿಶೀಲಿಸಲು ಆಡಳಿತ ಸಲಹೆಗಾರರು(Consultant Administration) ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | | |
|---|---|---|
| 1 | ಹುದ್ದೆಯ ಹೆಸರು | ರಾಜ್ಯ ಗುಣ ನಿಯಂತ್ರಣ ಮಾನಿಟರ್(ಸಿವಿಲ್) |
| | ವಯಸ್ಸು | 65 ವರ್ಷದೊಳಗೆ |
| | ಅರ್ಹತೆ / ಅನುಭವ | 1. ಲೋಕೋಪಯೋಗಿ ಇಲಾಖೆ / ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್(ಸಿವಿಲ್) ಅಥವಾ ಮೇಲ್ಪಟ್ಟ ಹುದ್ದೆಯಲ್ಲಿ ನಿವೃತ್ತಿ ಹೊಂದಿರುವವರು.<br>2. ಸಿವಿಲ್ ಇಂಜಿನಿಯರಿಂಗ್ ಪದವೀಧರರಾಗಿರಬೇಕು / ಡಿಪ್ಲೊಮಾ (ಸಿವಿಲ್) ವಿದ್ಯಾರ್ಹತೆ ಹಾಗೂ ನರೇಗಾ ಯೋಜನೆಯ ಕಾಮಗಾರಿಗಳ ಕುರಿತು ಕಾರ್ಯನಿರ್ವಹಿಸಿರುವ ಅನುಭವ ಹೊಂದಿರಬೇಕು<br>3. ಅಭ್ಯರ್ಥಿಯು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ಸಿದ್ಧರಿದ್ದು ದೈಹಿಕವಾಗಿ ಸಮರ್ಥರಾಗಿರಬೇಕು. |

| | | |
|---|---|---|
| 2 | ಹುದ್ದೆಯ ಹೆಸರು | ರಾಜ್ಯ ಗುಣ ನಿಯಂತ್ರಣ ಮಾನಿಟರ್(ಕೃಷಿ) |
| | ವಯಸ್ಸು | 65 ವರ್ಷದೊಳಗೆ |
| | ಅರ್ಹತೆ / ಅನುಭವ | 1. ಕೃಷಿ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು (ಕೃಷಿ) ಅಥವಾ ಮೇಲ್ಪಟ್ಟ ಹುದ್ದೆಯಲ್ಲಿ ನಿವೃತ್ತಿ ಹೊಂದಿರುವವರು.<br>2. ಕೃಷಿ ಪದವೀಧರರಾಗಿರಬೇಕು ಹಾಗೂ ನರೇಗಾ ಯೋಜನೆಯ ಕಾಮಗಾರಿಗಳ ಕುರಿತು ಕಾರ್ಯನಿರ್ವಹಿಸಿರುವ ಅನುಭವ ಹೊಂದಿರಬೇಕು.<br>3. ಅಭ್ಯರ್ಥಿಯು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ಸಿದ್ಧರಿದ್ದು ದೈಹಿಕವಾಗಿ ಸಮರ್ಥರಾಗಿರಬೇಕು. |

| | | |
|---|---|---|
| 3 | ಹುದ್ದೆಯ ಹೆಸರು | ರಾಜ್ಯ ಗುಣ ನಿಯಂತ್ರಣ ಮಾನಿಟರ್(ತೋಟಗಾರಿಕೆ) |
| | ವಯಸ್ಸು | 65 ವರ್ಷದೊಳಗೆ |
| | ಅರ್ಹತೆ / ಅನುಭವ | 1. ತೋಟಗಾರಿಕೆ ಇಲಾಖೆಯಲ್ಲಿ ಹಿರಿಯ ಸಹಾಯಕ ನಿರ್ದೇಶಕರು(ತೋಟಗಾರಿಕೆ) ಅಥವಾ ಮೇಲ್ಪಟ್ಟ ಹುದ್ದೆಯಲ್ಲಿ ನಿವೃತ್ತಿ ಹೊಂದಿರುವವರು.<br>2. ಕೃಷಿ ಪದವೀಧರರಾಗಿರಬೇಕು ಹಾಗೂ ನರೇಗಾ ಯೋಜನೆಯ ಕಾಮಗಾರಿಗಳ ಕುರಿತು ಕಾರ್ಯನಿರ್ವಹಿಸಿರುವ ಅನುಭವ ಹೊಂದಿರಬೇಕು.<br>3. ಅಭ್ಯರ್ಥಿಯು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ಸಿದ್ಧರಿದ್ದು ದೈಹಿಕವಾಗಿ ಸಮರ್ಥರಾಗಿರಬೇಕು. |

| | | |
|---|---|---|
| 4 | ಹುದ್ದೆಯ ಹೆಸರು | ರಾಜ್ಯ ಗುಣ ನಿಯಂತ್ರಣ ಮಾನಿಟರ್(ಅರಣ್ಯ) |
| | ವಯಸ್ಸು | 65 ವರ್ಷದೊಳಗೆ |
| | ಅರ್ಹತೆ / ಅನುಭವ | 1. ಅರಣ್ಯ ಇಲಾಖೆಯಲ್ಲಿ ವಲಯ ಅರಣ್ಯ ಅಧಿಕಾರಿಯಾಗಿ ಅಥವಾ ಮೇಲ್ಪಟ್ಟ ಹುದ್ದೆಯಲ್ಲಿ ನಿವೃತ್ತಿ ಹೊಂದಿರುವವರು.<br>2. ಕೃಷಿ /ಅರಣ್ಯ / ವಿಜ್ಞಾನ ಪದವೀಧರರಾಗಿರಬೇಕು ಹಾಗೂ ನರೇಗಾ ಯೋಜನೆಯ ಕಾಮಗಾರಿಗಳ ಕುರಿತು ಕಾರ್ಯನಿರ್ವಹಿಸಿರುವ ಅನುಭವ ಹೊಂದಿರಬೇಕು.<br>3. ಅಭ್ಯರ್ಥಿಯು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ಸಿದ್ಧರಿದ್ದು ದೈಹಿಕವಾಗಿ ಸಮರ್ಥರಾಗಿರಬೇಕು. |

| | | |
|---|---|---|
| 5 | ಹುದ್ದೆಯ ಹೆಸರು | ಆಡಳಿತ ಸಲಹೆಗಾರರು |
| | ವಯಸ್ಸು | 65 ವರ್ಷದೊಳಗೆ |
| | ಅರ್ಹತೆ / ಅನುಭವ | 1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಿಂತ ಮೇಲ್ಪಟ್ಟ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ, ನಿವೃತ್ತಿ ಹೊಂದಿರುವವರು.<br>2) ಪದವೀಧರರಾಗಿರಬೇಕು ಹಾಗೂ ನರೇಗಾ ಯೋಜನೆಯ ಕಾಮಗಾರಿಗಳ ಕುರಿತು ಕಾರ್ಯನಿರ್ವಹಿಸಿರುವ ಅನುಭವ ಹೊಂದಿರಬೇಕು.<br>3) ಅಭ್ಯರ್ಥಿಯು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ಸಿದ್ಧರಿದ್ದು ದೈಹಿಕವಾಗಿ ಸಮರ್ಥರಾಗಿರಬೇಕು. |

ಮೇಲಿನ ಹುದ್ದೆಗಳಿಗೆ ಎಂಪ್ಯಾನಲ್ ಮಾಡಿಕೊಳ್ಳಲು ಅರ್ಜಿಗಾಗಿ ಹಾಗೂ ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.mgnregakarnataka.com ನಲ್ಲಿ ನೋಡಬಹುದು. ಸದರಿ ವೆಬ್‌ಸೈಟ್ ಮೂಲಕ ಅವರೋಹಣ ಮಾಡಿದ ಅರ್ಜಿಯನ್ನು ಭರ್ತಿ ಮಾಡಿ, ಪೂರಕ ದಾಖಲೆಗಳೊಂದಿಗೆ ದಿನಾಂಕ: 20-02-2021 ರೊಳಗಾಗಿ e-mail: careers.nrega@gmail.com ಮೂಲಕ PDF ಫಾರ್ಮಾಟ್‌ನಲ್ಲಿ ಸಲ್ಲಿಸುವುದು. ಭೌತಿಕ ಅರ್ಜಿಗಳನ್ನು ಸಹ ಸ್ವೀಕರಿಸಲಾಗುವುದು. ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದ ನಂತರ ಸ್ವೀಕೃತ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಸದರಿ ಹುದ್ದೆಗೆ ನಿಗಧಿಪಡಿಸಿರುವ ಅನುಭವ, ವಯಸ್ಸು, ಅಥವಾ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ ಕುರಿತು ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಹಾಯಕ ನಿರ್ದೇಶಕರು(ಆಡಳಿತ) ರವರ ಕಛೇರಿ ದೂರವಾಣಿ ಸಂಖ್ಯೆ: 080-22342163 ಗೆ ಕರೆ ಮಾಡಬಹುದು.

ಸಹಿ/-

**ಮುಖ್ಯ ಕಾರ್ಯಾಚರಣೆ ಅಧಿಕಾರಿ**
**ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ**
**ಗ್ರಾಮೀಣಾಬಿವೃಧ್ಧಿ ಮತ್ತು ಪಂ.ರಾಜ್ ಇಲಾಖೆ**

Government of Karnataka
Rural Development Commissionerate
2nd Floor, 3rd Gate, M.S. Building, Bangalore-560001
Phone Number: 080-22372163 e-mail: nrega@karnataka.gov.in

No: RDP : 14 : EGS :2021 Date:01-02-2021

## NOTIFICATION

Applications are invited from eligible candidates, for the Empanelment of State and District Quality Monitors and Consultant Administration. Details of eligibility criteria etc., are as below:

| | | |
|---|---|---|
| 1 | **Name of the Post** | **State Quality Monitor (Civil)** |
| | **Age Limit** | Below 65 Yrs |
| | **Eligibility / Experience** | 1) Candidate should be retired from Public Works Department / Panchayath Raj Engineering Department and should have worked in the post above the rank of Assistant Engineer (Civil).<br>2) Candidate should possess Diploma / Degree in Civil Engineering with working experience in projects related to NREGA.<br>3) Candidate should be physically fit and willing to travel throughout the state. |

| | | |
|---|---|---|
| 2 | **Name of the Post** | **State Quality Monitor (Agriculture)** |
| | **Age Limit** | Below 65 Yrs |
| | **Eligibility / Experience** | 1) Candidate should be retired from Agriculture Department and should have worked in the post above the rank of Assistant Director (Agriculture).<br>2) Candidate should possess Degree in Agriculture Sciences with working experience in projects related to NREGA.<br>3) Candidate should be physically fit and willing to travel throughout the state. |

| | | |
|---|---|---|
| 3 | **Name of the Post** | **State Quality Monitor (Horticulture)** |
| | **Age Limit** | Below 65 Yrs |
| | **Eligibility / Experience** | 1) Candidate should be retired from Horticulture Department and should have worked in the post above the rank of Senior Assistant Director (Horticulture).<br>2) Candidate should possess Degree in Agriculture / Horticulture Sciences with working experience in projects related to NREGA..<br>3) Candidate should be physically fit and willing to travel throughout the state. |

| 4 | Name of the Post | State Quality Monitor (Forestry) |
|---|---|---|
| | Age Limit | Below 65 Yrs |
| | Eligibility / Experience | 1) Candidate should be retired from Forest Department and should have worked in the post above the rank of Range Forest Officer.<br>2) Candidate should possess Degree in Agriculture / Forestry / Science with working experience in projects related to NREGA.<br>3) Candidate should be physically fit and willing to travel throughout the state. |

| 5 | Name of the Post | Consultant Administration |
|---|---|---|
| | Age Limit | Below 65 Yrs |
| | Eligibility / Experience | 1) Candidate should be retired from Rural Development and Panchayath Raj Department and should have worked in the post, above the rank of Executive Officer.<br>2) Candidate should possess a Degree with working experience in projects related to NREGA.<br>3) Candidate should be physically fit and willing to travel throughout the state. |

Details regarding the same are available at www.mgnregakarnataka.com. Candidates can download the application from the website. Duly filled application should be sent in PDF format on or before 20-02-2021, through e-mail to careers.nrega@gmail.com. Applications submitted after the last date will not be considered. Physical applications are also accepted. Any information furnished by the applicant, if found false, will be liable for rejection.

For further details, Contact Assistant Director(Admn):080–22342163 during office hours.

Sd/-

**CHIEF OPERATING OFFICER**
**RURAL DEVELOPMENT COMMISSIONERATE**
**RURAL DEVELOPMENT & PANCHAYATH RAJ DEPARTMENT**

## ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಜಿಲ್ಲಾ/ರಾಜ್ಯ ಗುಣ ನಿಯಂತ್ರಕರು ಹಾಗೂ ಆಡಳಿತ ಸಲಹೆಗಾರರ ಎಂಪ್ಯಾನೆಲ್‌ಮೆಂಟ್‌ಗಾಗಿ ಅರ್ಜಿ ನಮೂನೆ

ಅಭ್ಯರ್ಥಿಯ ಭಾವಚಿತ್ರ

| | | |
|---|---|---|
| 1 | ಅರ್ಜಿದಾರರ ಹೆಸರು: | |
| 2 | ಪ್ರಸ್ತುತ ವಿಳಾಸ: | |
| 3 | ಖಾಯಂ ವಿಳಾಸ: | |
| 4 | ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್: | |
| 5 | ಹುಟ್ಟಿದ ದಿನಾಂಕ ಮತ್ತು ವಯಸ್ಸು: | |
| 6 | ವಿದ್ಯಾರ್ಹತೆ: | |
| 7 | ನೀವು ವೈದ್ಯಕೀಯವಾಗಿ (ದೈಹಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ಸಮರ್ಥರಾಗಿರುವ ಕುರಿತು ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು. | |
| 8 | ನಿವೃತ್ತಿ ಹೊಂದಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕೃತ ಪತ್ರ<br>ಕ್ರಿಮಿನಲ್ ಪ್ರಕರಣದಲ್ಲಿ/ಇಲಾಖಾ ವಿಚಾರಣೆಗಳು ಇಲ್ಲದೆ ಇರುವ ಕುರಿತು.<br>ಪಬ್ಲಿಕ್ ನೋಟರಿಯಿಂದ ದೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು. | |
| 9 | ಸೇವಾನುಭವದ ವಿವರಗಳು | |

| ಕ್ರಸಂ | ಇಲಾಖೆ | ನಿವೃತ್ತಿ ಹೊಂದಿದ ಹುದ್ದೆಯ ವಿವರ | ಕರ್ತವ್ಯ ಮತ್ತು ಜವಾಬ್ದಾರಿ | ಅವಧಿ | ನಿರ್ವಹಿಸಿದ ಕರ್ತವ್ಯದ ಸೇವಾ ವಿವರ |
|---|---|---|---|---|---|
| 1 | 2 | 3 | 4 | 5 | 6 |
| | | | | | |
| | | | | | |

| | | |
|---|---|---|
| 10 | ಯಾವ ಹುದ್ದೆಗಾಗಿ ಅರ್ಜಿ ಸಲ್ಲಿಸಲಾಗಿದೆ | 1. ರಾಜ್ಯ ಗುಣ ನಿಯಂತ್ರಣ ಮಾನಿಟರ್<br>2. ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ |
| 11 | ಯಾವ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತರಾಗಿದ್ದೀರಿ ವಿವರಗಳು: | |

## ಘೋಷಣೆ

ನಾನು ------------------- ಮೇಲ್ಕಂಡಂತೆ ನೀಡಿರುವ ಮಾಹಿತಿಯು ಸತ್ಯವಾಗಿರುತ್ತದೆ. ತಪ್ಪು ಮಾಹಿತಿ ನೀಡಿದ ಸಂದರ್ಭದಲ್ಲಿ ಕಾನೂನಿನ ಕ್ರಮಕ್ಕೆ ಒಳಗಾಗುವುದರ ಬಗ್ಗೆ ನನಗೆ ಮನವರಿಕೆಯಾಗಿದೆಯೆಂದು ಘೋಷಿಸುತ್ತೇನೆ.

ನಾನು -------------------- ಈ ಮೂಲಕ ದೃಢೀಕರಿಸುವುದೇನೆಂದರೆ, ನನ್ನ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಶಿಸ್ತಿನ ಪ್ರಕರಣಗಳು ಇರುವುದಿಲ್ಲವೆಂದು ದೃಢೀಕರಿಸುತ್ತೇನೆ.

ನಾನು ------------------- ದೈಹಿಕ ದೃಢತೆ ಹೊಂದಿರುವುದಲ್ಲದೇ, ಕ್ಷೇತ್ರ ಮಟ್ಟದ ಭೇಟಿಗೆ ಪ್ರವಾಸ ಕೈಗೊಳ್ಳಲು ಸಮರ್ಥನಾಗಿರುತ್ತೇನೆಂದು ದೃಢೀಕರಿಸುತ್ತೇನೆ.

ಸ್ಥಳ: ಅಭ್ಯರ್ಥಿಯ ಸಹಿ/-

ದಿನಾಂಕ:

**ಈ ಕೆಳಕಂಡ ಷರತ್ತುಗಳನ್ನು ಪಾಲಿಸಲು ಸೂಚಿಸಲಾಗಿದೆ:**

1. ರಾಜ್ಯ ಗುಣ ನಿಯಂತ್ರಕರು ಸಾರ್ವಜನಿಕ ಸೇವೆಯ ಧ್ಯೇಯವನ್ನು ಹೊಂದಿರಬೇಕು ಹಾಗೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿರಬೇಕು.
2. ಸದರಿ ರಾಜ್ಯ ಗುಣ ನಿಯಂತ್ರಕರನ್ನು ಆಯ್ಕೆ ಸಮಿತಿ ಮೂಲಕ ಅವರ ವಿಷಯದ ಜ್ಞಾನ, ಅನುಭವ ಆಧರಿಸಿ ಆಯ್ಕೆ ಮಾಡಲಾಗುವುದು.
3. ನೇಮಕಾತಿಯಾದ ರಾಜ್ಯ ಗುಣ ನಿಯಂತ್ರಕರು ಮಾಹೆಯಲ್ಲಿ ಸರಿ ಸುಮಾರಾಗಿ 8-10 ದಿನಗಳ ಕ್ಷೇತ್ರ ಭೇಟಿ ನೀಡಿ ಪರಿವೀಕ್ಷಣೆ, ತನಿಖೆಗಳನ್ನು ಈ ಯೋಜನೆಯ ಕಾರ್ಯಸೂಚಿ ಪ್ರಕಾರ ನಿರ್ವಹಿಸಿ ನಿಗಧಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸತಕ್ಕದ್ದು, ಈ ವರದಿಗಳನ್ನು 3 ಪ್ರತಿಗಳಲ್ಲಿ ತಯಾರಿಸಿ ಮೊದಲ ಪ್ರತಿಯನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು 2 ಮುದ್ರಿತ ಪ್ರತಿಗಳನ್ನು ಸಾಫ್ಟ್ ಪ್ರತಿಯೊಂದಿಗೆ ಆಯುಕ್ತಾಲಯಕ್ಕೆ ಸಲ್ಲಿಸತಕ್ಕದ್ದು, ಇದರಲ್ಲಿ ಅವರು ಅಗತ್ಯ ದಾಖಲೆಗಳನ್ನು ಲಗತ್ತಿಸತಕ್ಕದ್ದು ಹಾಗೂ ತಮ್ಮ ತಾಂತ್ರಿಕ ಅಭಿಪ್ರಾಯವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಪರೀವೀಕ್ಷಣೆ/ತನಿಖೆ ನಡೆಸಿದ ಬಗ್ಗೆ ಛಾಯಾ ಚಿತ್ರಗಳು ಹಾಗೂ ಮಹಜರ್ ಇತ್ಯಾದಿಗಳನ್ನು ಲಗತ್ತಿಸತಕ್ಕದ್ದು. ಸಾಮಾನ್ಯವಾಗಿ ಜಿಲ್ಲಾ ಗುಣ ನಿಯಂತ್ರಕರು ಪರೀವೀಕ್ಷಣೆ/ ತನಿಖೆಯ ಸಂದರ್ಭದಲ್ಲಿ ವಿನ್ಯಾಸ, ತಾಂತ್ರಿಕ ವಿಷಯ, ಅಂದಾಜು ಪತ್ರಿಕೆ ಹಾಗೂ ಬಿಲ್ಲುಗಳ ತಯಾರಿಕೆ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಳ್ಳುವುದರಲ್ಲಿ ಮಾರ್ಗದರ್ಶನ ನೀಡುವುದು.
4. ಆಯ್ಕೆಯಾಗುವ ರಾಜ್ಯ ಗುಣ ನಿಯಂತ್ರಕರುಗಳು ದೈಹಿಕ ಧೃಡತೆ ಹೊಂದಿರಬೇಕು ಹಾಗೂ ಕ್ಷೇತ್ರ ಮಟ್ಟದ ಭೇಟಿಗೆ ಪ್ರವಾಸ ಕೈಗೊಳ್ಳಲು ಸಮರ್ಥರಾಗಿರಬೇಕು. ಸಂದರ್ಶನ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಯಿಂದ ದೈಹಿಕ ದೃಢತೆ ಬಗ್ಗೆ ವೈದ್ಯಕೀಯ ದೃಢೀಕರಣ ಪತ್ರ ಆಯ್ಕೆ ಸಮಿತಿ ಮುಂದೆ ಸಲ್ಲಿಸುವುದು.
5. ರಾಜ್ಯ ಗುಣ ನಿಯಂತ್ರಕರುಗಳ ಆಯ್ಕೆಗೆ ಕನಿಷ್ಠ ವಯೋಮಿತಿ 60 ವರ್ಷದಿಂದ ಗರಿಷ್ಠ ವಯೋಮಿತಿ 65 ವರ್ಷಗಳಾಗಿದ್ದು, ಸಂದರ್ಶನದ ವೇಳೆ ಸೂಕ್ತ ದಾಖಲೆಗಳನ್ನು ಒದಗಿಸತಕ್ಕದ್ದು. ಈ ನೇಮಕಾತಿಯು ಒಂದು ವರ್ಷಕ್ಕೆ ಸೀಮಿತವಾಗಿದ್ದು, ಸಂಬಂಧಿಸಿದ ರಾಜ್ಯ ಗುಣ ನಿಯಂತ್ರಕರುಗಳು ಕಾರ್ಯ ಕ್ಷಮತೆ ಆಧರಿಸಿ ಸೇವೆ ವಿಸ್ತರಿಸಲಾಗುವುದು.
6. ಆಯ್ಕೆಯಾಗುವ ರಾಜ್ಯ ಗುಣ ನಿಯಂತ್ರಕರುಗಳ ಮೇಲೆ ಯಾವುದೇ ಇಲಾಖಾ ವಿಚಾರಣೆ/ಶಿಸ್ತು ಪ್ರಕರಣಗಳು ಇರತಕ್ಕದ್ದಲ್ಲ. (ಪಬ್ಲಿಕ್ ನೋಟರಿಯಿಂದ ದೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು)

7. ರಾಜ್ಯ ಗುಣನಿಯಂತ್ರಕರು, ಗ್ರಾಮೀಣ ರಸ್ತೆ ನಿರ್ಮಾಣ ಮತ್ತು ಅದಕ್ಕೆ ಸಂಬಂಧಿಸಿದ ವಿನ್ಯಾಸ ಕಾಮಗಾರಿ, ಸಣ್ಣ ಕೆರೆಗಳ ನಿರ್ಮಾಣ, ಕಟ್ಟಡಗಳ ನಿರ್ಮಾಣ, ಬಿಲ್ಲುಗಳ ತಯಾರಿಕೆ, ಸಿವಿಲ್ ಇಂಜಿನಿಯರಿಂಗ್‌ಗಳ ಕೆಲಸ ನಿರ್ವಹಣೆ,

[illegible]ಯ ಗುಣಮಟ್ಟ ಹಾಗೂ ಕಟ್ಟಡ ನಿರ್ಮಾಣ ಸಾಮಾಗ್ರಿಗಳ, ಬಳಕೆಯಾದ ಪ್ರಮಾಣವನ್ನು ದೃಢೀಕರಿಸುವುದು, ಇತ್ಯಾದಿ ವಿಷಯಗಳಲ್ಲಿ ಅನುಭವ ಹೊಂದಿರತಕ್ಕದ್ದು.

8. ಸಿವಿಲ್ ಇಂಜಿನಿಯರಿಂಗ್ ರಾಜ್ಯ ಗುಣ ನಿಯಂತ್ರಕರ ಆಯ್ಕೆಗೆ ಕನಿಷ್ಠ 15 ವರ್ಷ ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸಮಯದಲ್ಲಿ ಕನಿಷ್ಠ 5 ವರ್ಷ ಕ್ಷೇತ್ರಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಅಥವಾ ಅದಕ್ಕಿಂತ ಮೇಲಿನ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.
9. ಅರಣ್ಯ/ ಕೃಷಿ/ ತೋಟಗಾರಿಕೆ ರಾಜ್ಯ ಗುಣ ನಿಯಂತ್ರಕರುಗಳ ಆಯ್ಕೆಗೆ ಸರ್ಕಾರದಲ್ಲಿ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತಿ ಪೂರ್ವ 5 ವರ್ಷ ಕ್ಷೇತ್ರಮಟ್ಟದಲ್ಲಿ ಕ್ರಮವಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಕೃಷಿ ನಿರ್ದೇಶಕರು/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ರೇಷ್ಮೆ ಸಹಾಯಕ ನಿರ್ದೇಶಕರು ಅಥವಾ ಮೇಲ್ಪಟ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳು ಅರ್ಹರಾಗಿರುತ್ತಾರೆ.
10. ರಾಜ್ಯ ಗುಣ ನಿಯಂತ್ರಕರ ಆಯ್ಕೆ ಸಂಬಂಧ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕು ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಲ್ಲಿ ಕಾಯ್ದಿರಿಸಲಾಗಿದೆ.
11. ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದಂತೆ ಪೂರಕ ದಾಖಲೆಗಳನ್ನು ಸಂದರ್ಶನ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
12. ಆಯ್ಕೆಯಾದ ಜಿಲ್ಲಾ ಗುಣ ನಿಯಂತ್ರಕರುಗಳು ಇಲಾಖೆಯೊಂದಿಗೆ ಸೇವಾ ಒಪ್ಪಂದ (Service level agreement) ಮಾಡಿಕೊಳ್ಳತಕ್ಕದ್ದು.
13. ಆಯ್ಕೆಯಾದ ಗುಣ ನಿಯಂತ್ರಕರುಗಳು ಸೇವೆಯಿಂದ ಮುಕ್ತತೆ (Empanelment ನಿಂದ) ಹೊಂದಲು ಇಚ್ಛಿಸಿದ್ದಲ್ಲಿ ಇಲಾಖೆಗೆ ಒಂದು ತಿಂಗಳು ಮುಂಚಿತವಾಗಿ ನೋಟಿಸ್ ನೀಡತಕ್ಕದ್ದು.
14. ಆಯ್ಕೆಯಾದ ರಾಜ್ಯ ಗುಣ ನಿಯಂತ್ರಕರುಗಳನ್ನು ಎಂಪ್ಯಾನೆಲ್‌ಮೆಂಟ್ ಸೇವೆಯಲ್ಲಿ ಅವರ ಸೇವೆಯು ಇಲಾಖೆಗೆ ತೃಪ್ತಿಕರವಾಗಿ ಕಂಡುಬಂದಲ್ಲಿ ಮಾತ್ರ ಸೇವೆಯಲ್ಲಿ ಮುಂದುವರೆಸಲಾಗುವುದು.
15. ರಾಜ್ಯ ಗುಣ ನಿಯಂತ್ರಕರುಗಳನ್ನು ಯಾವುದೇ ಸಂದರ್ಭದಲ್ಲಿ ಎಂಪ್ಯಾನೆಲ್ ಸೇವೆಯಿಂದ ತೆಗೆದು ಹಾಕಬಹುದಾಗಿದೆ ಮತ್ತು ಸದರಿ ಸೇವೆಯಿಂದ ತೆಗೆದುಹಾಕುವ ಬಗ್ಗೆ ಇಲಾಖೆಯು ಯಾವುದೇ ಕಾರಣಗಳನ್ನು ನೀಡಲಾಗುವುದಿಲ್ಲ.
16. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಹಾಯಕ ನಿರ್ದೇಶಕರು (ಆಡಳಿತ) ದೂರಾವಾಣಿ ಸಂ: 080-22342163 ಇವರನ್ನು ಸಂಪರ್ಕಿಸಬಹುದಾಗಿದೆ.

ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ